REVIEW OF RESEARCH
IMPACT FACTOR : 5.7631(UIF) UGC APPROVED JOURNAL NO. 48514 ISSN: 2249-894X

VOLUME - 8 | ISSUE - 6 | MARCH - 2019

# ಮಹಿಳೆ ಸಾಗಿ ಬಂದ ಹಾದಿ–ಒಂದು ಅವಲೋಕನ

ಡಾ. ಪ್ರೇಮಲತ. ಹೆಚ್.ಎಸ್.
ಕನ್ನಡ ಸಹ ಪ್ರಾಧ್ಯಾಪಕರು, ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ.



ಮಾನವನ ಜನಾಂಗವನ್ನು ಕುರಿತು ನಾವು ಆಲೋಚಿಸುವಾಗ ಮಾತನಾಡುವಾಗ, ಪುರಷನ ಕಲ್ಪನೆಯ ಜೊತೆ ಜೊತೆಯಾಗಿ ಮಹಿಳೆಯ ಚಿತ್ರಣವೂ ನಮ್ಮ ಮನದಲ್ಲಿ ಗೋಚರಿಸುತ್ತದೆ. ಆದರೆ ಮಾನವ ಕುಲದ ಅಭಿವೃದ್ಧಿಯಲ್ಲಿ ಸಮಪಾಲುದಾರಳಾದ ಮಹಿಳೆಯು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇತ್ತೀಚಿನ ದಿನಗಳವರೆಗೂ ಅಸ್ಪಷ್ಟವಾಗಿದ್ದಾಳೆಂಬುದು ಸರ್ವ ವಿದಿತ ಸಂಗತಿಯಾಗಿದೆ. ಭಾರತದಲ್ಲಿ ಮಾತ್ರವಲ್ಲದೇ ಇಡೀ ವಿಶ್ವದಲ್ಲಿಯೇ ಪ್ರಾಚೀನ ಕಾಲದಿಂದಲೂ ಲಿಂಗ ತಾರತಮ್ಯ ನೀತಿಯ ಅಸಮಾನತೆಯ ನೆಲೆಯಲ್ಲಿಯೇ ಎರಡನೆ ದರ್ಜೆ ಪ್ರಜೆಯಾಗಿ ಮಹಿಳೆ ಬದುಕು ಸಾಗಿಸುತ್ತಾ ಬಂದಿದ್ದಾಳೆ. ವಿಜ್ಞಾನ ತಂತ್ರಜ್ಞಾನದ ಭರಾಟೆಯ ಈ ಯುಗದಲ್ಲಿಯು ಹೆಣ್ಣು ಮಗು ಹುಟ್ಟಿದರೆ ಆಕಾಶದತ್ತ ಶೂನ್ಯ ನೋಟ ಬಿರುವ ಪಾಲಕರು ನಮ್ಮ ನಡುವೆ ಇದ್ದಾರೆ.

ಒಂದು ಸಮಾಜದ ಸಂಸ್ಕೃತಿಯ ಔನ್ಯತ್ಯವು ಅಲ್ಲಿಯ ಸ್ತ್ರೀಯರ ಸ್ಥಾನಮಾನಗಳನ್ನು ಅವಲಂಬಿಸಿರುತ್ತದೆ. ನಾಲ್ಕು ಗೋಡೆಗಳ ನಡುವೆ ಗಂಡಿನ ಭೋಗದ ವಸ್ತುವಾಗಿ, ಮಕ್ಕಳನ್ನು ಹೆರುವ ಯಂತ್ರವಾಗಿ ನಮ್ಮ ಸಂಪ್ರದಾಯ ಬದ್ಧ ಸಮಾಜವು ಮಹಿಳೆಯನ್ನು ಶತಶತಮಾನದವರೆಗೂ ನಡೆಸಿಕೊಂಡು ಬಂದಿದೆ. ಆದರೂ ಕಾಲಕ್ಕೆ ತಕ್ಕಂತೆ ಮಹಿಳೆಯ ಸ್ಥಾನಮಾನಗಳಲ್ಲಿ ಹಲವು ಬದಲಾವಣೆಗಳು ಆಗುತ್ತಾ ಬಂದಿದ್ದು, ನಮ್ಮ ವೇದಗಳೂ, ಪುರಾಣಗಳೂ ಮಾಹಾಕಾವ್ಯಗಳೂ ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆ ನಡೆದು ಬಂದ ದಾರಿಯನ್ನು ಅವಲೋಕಿಸಲು ದಾರಿ ದೀಪವಾಗಿವೆ.

ವೇದಗಳ ಕಾಲದಲ್ಲಿ ಕೃಷಿ ಪ್ರಧಾನ ವ್ಯವಸ್ಥೆ ಹಾಗೂ ಅವಿಭಕ್ತ ಕುಟುಂಬ ಪದ್ಧತಿಗಳು ಪ್ರಧಾನವಾಗಿದ್ದವು. ಸಮಾಜದ ಪ್ರತೀ ಚಟುವಟಿಕೆಗಳಲ್ಲೂ ಮಹಿಳೆಯು ಸಮಾನವಾಗಿ ಪುರುಷನೊಂದಿಗೆ ಭಾಗವಹಿಸುತ್ತಿದ್ದು ಸ್ತ್ರೀ ಪುರುಷರ ನಡುವೆ ಅಷ್ಟಾಗಿ ಅಂತರವಿರಲಿಲ್ಲ. ವಿದ್ಯಾಭ್ಯಾಸ ಹಾಗೂ ವಿವಾಹಕ್ಕೆ ಸಂಬಂಧಿಸಿದಂತೆ ಸ್ತ್ರೀ ಸಂಪೂರ್ಣ ಸ್ವಾತಂತ್ರ್ಯ ಹೊಂದಿದ್ದಳು. ಯಾಜ್ಞವಲ್ಕ ಮಹರ್ಷಿ ಜೊತೆಗೆ ಸರಿಸಮನಾಗಿ ವಾದ ವಿವಾದ ಮಾಡುತ್ತಿದ್ದ ಮೈತ್ರೇಯಿ, ಗಾರ್ಗಿಯಂತಹ ಮಹಿಳೆಯರನ್ನು ವೇದಗಳ ಕಾಲದಲ್ಲಿ ಕಾಣಬಹುದಿತ್ತು.

ಮಹಾಕಾವ್ಯಗಳ ಕಾಲದಲ್ಲಿಯೂ ಮಹಿಳೆಯೂ ಪುರುಷನ ಸಹಧರ್ಮಿಣಿಯೆಂಬ ಗೌರವಕ್ಕೆ ಪಾತ್ರಳಾಗಿ ಯುದ್ಧರಂಗದಲ್ಲಿ ತಮ್ಮ ಪತಿಯಂದಿರ ಗೆಲುವಿಗೆ ಶ್ರಮಿಸಿದ ಸಂದರ್ಭಗಳು ಕಂಡು ಬರುತ್ತವೆ. ಉದಾಹರಣೆ; ರುಕ್ಮಿಣಿ, ಕೈಕೆ ಇತ್ಯಾದಿ. ಕಾಲಕ್ರಮೇಣ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನಗಳಲ್ಲಿ ಉಂಟಾದವು. ಮಹಿಳೆ ಪುರುಷನಗಿಂತ ಕೀಳೆಂಬ ಭಾವನೆ ಬಲವಾಯಿತು. ಹೆಣ್ಣಾದವಳು ಬಾಲ್ಯದಲ್ಲಿ ತಂದೆಯ, ಯೌವ್ವನದಲ್ಲಿ ಪತಿಯ ಹಾಗೂ ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಇರತಕ್ಕದ್ದು ಎಂಬ ಮನುಸ್ಮೃತಿಯ ಹೇಳಿಕೆ **ನಸ್ತ್ರೀಸ್ವಾತಂತ್ರ್ಯಮರ್ಹಂತಿ** ಎಂಬ ಮಾತನ್ನು ನಾವು ಮರೆಯುವಂತಿಲ್ಲ.

ಕ್ರಿ.ಶ. 8 ನೇ ಶತಮಾನದವರೆಗೆ ಭಾರತದಲ್ಲಿ ಪ್ರಮುಖ ಧರ್ಮವಾಗಿ ತಲೆ ಎತ್ತಿದ ಬೌದ್ಧ ಧರ್ಮವು ಮಹಿಳೆಗೆ ವಿಶೇಷವಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟು ಮಹಿಳೆಯರನ್ನು ಉನ್ನತ ವಿಚಾರಧಾರೆಯನ್ನು ಹೊಂದಿರಲಿಲ್ಲ. ಜೈನ ಧರ್ಮದ ಎರಡು ಪಂಥಗಳಾದ ಶ್ವೇತಾಂಬರ ಹಾಗೂ ದಿಗಂಬರರಲ್ಲಿ ಮಹಿಳೆಯರನ್ನು ಕುರಿತು ವಿರೋಧ ಅಭಿಪ್ರಾಯಗಳಿದ್ದವು. ದಿಗಂಬರರ ಪ್ರಕಾರ ಮೊಕ್ಷ ಸಾಧನೆಗೆ ದಿಗಂಬರತ್ವವು ಅವಶ್ಯಕ. ಆದರೆ ಸ್ತ್ರೀಯರಿಗೆ ಇದು ಅಸಾಧ್ಯವಾದ ಕಾರಣ ಈ ಧರ್ಮದ ಪ್ರಕಾರ ಹೆಣ್ಣು ಜನ್ಮಕ್ಕೆ ಮೋಕ್ಷವಿಲ್ಲ. ಹೀಗಾಗಿ ಪುರುಷನಗಿಂತ ಮಹಿಳೆ ಕೀಳು ಎಂಬ ಅಸಮಾನತೆ ಛಾಯೆ ಜೈನ ಧರ್ಮದಲ್ಲೂ ಕಾಣುತ್ತದೆ.

ಕ್ರಿ.ಶ 14-15 ನೆಯ ಶತಮಾನವು ಭಾರತದ ನಾರಿಯರ ಪಾಲಿಗೆ ಕರಾಳಯುಗವಾಗಿ ಪರಿಣಮಿಸಿತು. ಮಹಿಳಾ ಕುಲಕ್ಕೆ ಮುಸ್ಲಿಂ ಆಕ್ರಮಣಕಾರರ ದೆಶೆಯಿಂದ ಸತಿ ಪದ್ಧತಿ, ಬಾಲ್ಯ ವಿವಾಹ, ದೇವದಾಸಿ ಪದ್ಧತಿ, ಪರದಾ ಪದ್ಧತಿಯಂತಹ ಅನಿಷ್ಟಗಳು

ತಲೆದೋರಿದವು. ಮಹಿಳೆಯರನ್ನು ಕುರಿತಂತೆ ತೀರಾ ಸಂಕುಚಿತತೆ ಮೈದೋರಿ ಹೆಣ್ಣು ಗಂಡಿನ ಕೈಗೊಂಬೆಯಾಗಿ ಬಾಳಬೇಕೆಂಬ ಭಾವನೆ ಬಲವಾಯಿತು.

ಬ್ರಿಟಿಷರು ಭಾರತಕ್ಕೆ ಬಂದ ಸಮಯದಲ್ಲಂತೂ ಇಲ್ಲಿನ ಹೆಣ್ಣು ಮಕ್ಕಳ ಸ್ಥಿತಿ ತೀರಾ ಶೋಚನೀಯವಾಗಿತ್ತು. ಪಾಶ್ಚಾತ್ಯರ ಆಗಮನದೊಂದಿಗೆ ವೈಚಾರಿಕ ಮನೋಭಾವ, ವ್ಯಕ್ತಿ ಸ್ವಾತಂತ್ರ್ಯ ಸಮಾನತೆ ಕಲ್ಪನೆ ಮೊದಲಾದ ಅಂಶಗಳು ಭಾರತ ದೇಶದ ಮಹಿಳೆಯರ ಬದುಕಿನ ಬದಲಾವಣೆಯಲ್ಲಿ ಪ್ರಮುಖ ಪಾತ್ರವಹಿಸಿದವು. ಇದಕ್ಕೆ ಪೂರಕವಾಗಿ ಭಾರತ ದೇಶದ ಹಲವು ಸಮಾಜ ಸುಧಾರಕರು ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಗೋಪಾಲಕೃಷ್ಣ ಗೋಖಲೆ, ಮಹಾತ್ಮ ಗಾಂಧಿಜಿ ಮೊದಲಾದವರು ಸ್ತ್ರೀ ಶಿಕ್ಷಣ ಹಾಗೂ ಸಮಾನತೆಗಾಗಿ ಹಗಲಿರಳು ದುಡಿದರು. ಇದೆಲ್ಲದರೊಂದಿಗೆ ಯುರೋಪ ಮೂಲದ ಸಿಸ್ಟರ್ ನಿವೇದಿತಾ, ಅನಿಬೆಸೆಂಟ್, ಭಾರತೀಯರಾದ ಸರೋಜನಿ ನಾಯ್ಡು, ಪಂಡಿತ ರಮಾಬಾಯಿ ಮೊದಲಾದ ಮಹಿಳೆಯರು ತಮ್ಮ ರಾಜಕೀಯ ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳ ಮೂಲಕ ಮಹಿಳೆಯರ ಘನತೆಯನ್ನು ಹೆಚ್ಚಿಸಲು ದುಡಿದರು. ಇದರ ಫಲವಾಗಿ 21 ನೇ ಶತಮಾನದ ವೇಳೆಗೆ ಮಹಿಳೆಯರ ವೇಷ ಭೂಷಣ, ಆಲೋಚನಾ ವಿಧಾನ ಬದುಕಿನ ರೀತಿಗಳೆಲ್ಲವೂ ಬದಲಾವಣೆಗಳಿಗೆ ಒಳಗಾದವು. ಸಮಾಜದ ಪ್ರತೀ ಕ್ಷೇತ್ರದಲ್ಲೂ ಕೌಟುಂಬಿಕ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಹಾಗೂ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇಂದು ಮಹಿಳೆ ಪುರುಷನಿಗೆ ಸರಿ ಮಿಗಿಲೆಂಬಂತೆ ತನ್ನ ಕಾರ್ಯ ಕ್ಷಮತೆಯನ್ನು ಮೆರೆಯುತ್ತಿದ್ದು. ಅವಳ ಬದುಕಿನ ಬದಲಾವಣೆಯ ಹಾದಿಯನ್ನು ಸಂಕ್ಷಿಪ್ತವಾಗಿ ಗುರುತಿಸಬಹುದು.

**೧) ಕೌಟುಂಬಿಕ ಬದಲಾವಣೆ**: ಮನೆಗೆಲಸ ಮತ್ತು ಮಕ್ಕಳ ಲಾಲನೆ ಪಾಲನೆಗೆ ಭಾರತೀಯ ನಾರಿಯನ್ನು ನಮ್ಮ ಸಾಂಪ್ರದಾಯಕ ಕೌಟುಂಬಿಕ ವ್ಯವಸ್ಥೆಯು ಸೀಮಿತಗೊಳಿಸಿತ್ತು. ಆರ್ಥಿಕವಾಗಿ ಮಹಿಳೆಯು ಸಂಪೂರ್ಣವಾಗಿ ಪರಾವಲಂಬಿಯಾಗಿದ್ದಳು. ಆದ್ದರಿಂದ ಕುಟುಂಬಕ್ಕೆ ಸಂಬಂಧಿಸಿದ ಯಾವುದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ಆಕೆ ವಿಫಲಳಾಗಿದ್ದಳು. ಈಗ ಗ್ರಾಮೀಣ ಪ್ರದೇಶಗಳಿಂದ ಹಿಡಿದು ಪಟ್ಟಣ ಪ್ರದೇಶದ ವರೆಗೆ ಕುಟುಂಬದ ಚಿತ್ರಣವು ಬದಲಾಗಿದೆ. ಮೂಲಭೂತವಾಗಿ ಹೆಣ್ಣು ಮಕ್ಕಳು ಶಿಕ್ಷಿತರಾಗಿ ಸ್ವಾವಲಂಬನೆಯತ್ತ ಮುಖಮಾಡಿರುವುದು ಅವರಲ್ಲಿನ ಆತ್ಮಸ್ಥೈರ್ಯವನ್ನು ಹೆಚ್ಚಿಸಿದೆ. ಜೊತೆಗೆ ವಿವಾಹಿತ ಹಾಗೂ ಅವಿವಾಹಿತ ಸಂದರ್ಭದಲ್ಲಿ ಕೂಡ ತನ್ನ ಒಡಹುಟ್ಟಿದವರ ಬದುಕನ್ನು ರೂಪಿಸುವಲ್ಲಿ ಹಾಗೂ ಹೆತ್ತವರಿಗೆ ಮುಪ್ಪಿನಲ್ಲಿ ಆಶ್ರಯ ಕೊಡುವ ನಿಟ್ಟಿನಲ್ಲಿ ಕೂಡ ಆಕೆ ಹಿಂದೆ ಬಿದ್ದಿಲ್ಲ.

**೨) ಸಾಮಾಜಿಕ ಬದಲಾವಣೆ**:– ಸಾಮಾಜಿಕ ಕಟ್ಟು ಪಾಡುಗಳಲ್ಲಿ ಶತ ಶತಮಾನಗಳವರೆಗೆ ಸ್ವತಂತ್ರ ವ್ಯಕ್ತಿತ್ವವನ್ನು ಬೆಳಸಿಕೊಳ್ಳಲಾಗದೆ ಪುರುಷನ ಯಶಸ್ಸಿನ ಹಿಂದೆ ತನ್ನನ್ನು ತೊಡಗಿಸಿಕೊಂಡಿದ್ದ ಮಹಿಳಾ ಕುಲವು ಇಂದು ಸಮಾಜದ ಪ್ರಮುಖ ವಾಹಿನಿಯಲ್ಲಿ ತನ್ನನ್ನು ಗುರುತಿಸಿಕೊಂಡಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಆಧುನಿಕ ಸಮಾಜದ ಎಲ್ಲೆಡೆ ಆಡಳಿತ ವಲಯ, ಸಂಘ ಸಂಸ್ಥೆ, ಸರ್ಕಾರಿ ಕಛೇರಿಗಳು, ನ್ಯಾಯಾಲಯ, ಶಿಕ್ಷಣ ಕ್ಷೇತ್ರ ಮೊದಲಾದ ಎಲ್ಲ ಕಡೆ ಮಹಿಳೆಯ ಧ್ವನಿಯು ಇಂದು ಕೇಳಿ ಬರುತ್ತಿರುವುದು. ಮಹಿಳೆಯರ ಬದುಕು ಆರೋಗ್ಯಕರವಾದ ಬದಲಾವಣೆಯ ಹಾದಿಯಲ್ಲಿರುವುದರ ದ್ಯೋತಕವಾಗಿದೆ. ಅಷ್ಟೇ ಅಲ್ಲ ಪುರುಷರಿಗಿಂತಲೂ ಅಸಾಧ್ಯವಾದ ಕೆಲಸಗಳನ್ನು ಮಹಿಳೆ ಪ್ರಾಮಾಣಿಕವಾಗಿ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾಳೆ. ಉದಾಹರಣೆ, ಬಸ್ ನಿರ್ವಾಹಕಿ, ಆಟೋ ಚಾಲಕಿ,.

**೩) ಶೈಕ್ಷಣಿಕ ಬದಲಾವಣೆ**:– ಶಿಕ್ಷಣವು ಮಾನವ ಕುಲದ ಮುಲಭೂತ ಚಟುವಟಿಕೆಯಾಗಿದೆ. ಮಾತ್ರವಲ್ಲ ಮಾನವ ಜನಾಂಗದ ಅಭಿವೃದ್ಧಿಗೆ ಅತೀ ಅಗತ್ಯವಾದುದಾಗಿದೆ. ಪ್ರಾಚೀನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಗೃಹ ಜೀವನದ ಶಿಕ್ಷಣವನ್ನು ಪಡೆಯಲು ಮಾತ್ರ ಅವಕಾಶವಿತ್ತು. (ವೇದಗಳ ಕಾಲವನ್ನು ಹೊರತು ಪಡಿಸಿ) ಸ್ವಾತಂತ್ರ್ಯ ನಂತರ ಭಾರತ ಸರ್ಕಾರವು ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಹಾಗೂ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣದೊಂದಿಗೆ ಮಹಿಳೆಯರು ಇಂದು ಪುರುಷರಂತೆ ಸಂಪೂರ್ಣ ಸಾಕ್ಷರರಾಗುತ್ತಿದ್ದಾರೆ. ಶಿಕ್ಷಣ ವಂಚಿತ ಮಹಿಳೆಯು ಪ್ರಾಣಿಗಿಂತಲೂ ಕಡೆಯಾಗಿ ಬದುಕುತ್ತಿದ್ದು, ಇಂದು ಅಂತಹ ಬದುಕಿಗೆ ಆಕೆ ಇತಿಶ್ರೀ ಹಾಡಿದ್ದಾಳೆ. ಹೀಗಾಗಿ ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸರಿ ತಪ್ಪುಗಳನ್ನು ಆಲೋಚನೆ ಮಾಡಲು ಸಾಧ್ಯವಾಗಿದೆ. ಆತ್ಮ ವಿಶ್ವಾಸ, ಆತ್ಮ ಗೌರವಗಳಿಂದ ಕೂಡಿದ ಸ್ವಾವಲಂಬನೆಯ ಬದುಕಿನ ಅವಕಾಶ ಅವಳಿಗೆ ಶಿಕ್ಷಣದಿಂದ ಲಭಿಸಿದೆ. ಸುಶಿಕ್ಷಿತ ಮಹಿಳೆಯು ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ತನ್ನ ಹಕ್ಕು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುವುದು ಆಶಾದಾಯಕ ಸಂಗತಿಯಾಗಿದೆ.

**೪) ಆರ್ಥಿಕ ಬದಲಾವಣೆ**:– ಹಿಂದೆ ಗ್ರಾಮೀಣ ಮಹಿಳೆಯರು ಕೃಷಿಯನ್ನು ಅವಲಂಬಿಸಿ ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದರು. ಇಂದಿನ ಮಹಿಳೆಯರು ವಿದ್ಯಾವಂತರಾಗಿ ಸರ್ಕಾರಿ ಕಛೇರಿ, ಶಾಲಾ ಕಾಲೇಜು, ನ್ಯಾಯಾಲಯ, ವೈದ್ಯಕೀಯ ರಂಗಗಳಲ್ಲಿ ಅತೀ ಹೆಚ್ಚಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ವಿವಿಧ ಸಂಘ ಸಂಸ್ಥೆಗಳಲ್ಲಿ ಸಮಾಜ ಸೇವೆಯಲ್ಲಿ ಮಹಿಳೆ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಖಾಸಗಿ ಉದ್ದಿಮೆಗಳಲ್ಲಿಯೂ ಕೂಡ ಆಕೆ ಪಾಲುದಾರಳಾಗಿದ್ದಾಳೆ. ಇಂದು ಪುರುಷರಿಗೆ ಹೋಲಿಸಿದರೆ ಅಧ್ಯಾಪಕರಾಗಿ ಮಹಿಳೆಯರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದ ಅನಕ್ಷರಸ್ಥ ಮಹಿಳೆಯರ ಪಾಲಿಗೆ ವರದಾನವಾಗಿದೆ. ಕುಟುಂಬದ ನಿರ್ವಹಣೆಯಲ್ಲಿ ಪುರುಷನನ್ನು ಅವಲಂಬಿಸಿ ಬಾಳುವ ಅಸಹಾಯಕತೆಯಿಂದ ಹೊರಬರುವಂತಹ ಅವಕಾಶ ಮಹಿಳೆಯರಿಗೆ ದೊರಕಿದೆ.

**೫) ರಾಜಕೀಯ ಬದಲಾವಣೆ**:– ಇಂದಿನ ಮಹಿಳೆಯರು ರಾಜಕೀಯವಾಗಿ ಹಿಂದೆಂದಿಗಿಂತಲೂ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ವಿಧಾನ ಸಭೆ, ಲೋಕ ಸಭೆಯ ಸದಸ್ಯರಾಗಿ ಮಂತ್ರಿ ಪದವಿಗಳಲ್ಲಿ ಮುಖ್ಯ ಮಂತ್ರಿ, ಪ್ರಧಾನ ಮಂತ್ರಿ ಹಾಗೂ ರಾಷ್ಟ್ರಪತಿ ಹುದ್ದೆಯವರೆಗಿನ ಘನತೆಯನ್ನು ಪಡೆದು ಇಂದಿನ ಮಹಿಳೆಯು

ಪುರುಷನಿಗಿಂತಲೂ ಮುಂಚೂಣಿಯಲ್ಲಿದ್ದಾಳೆ. ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿಯವರಿಂದ ಮೊದಲುಗೊಂಡು ರಾಷ್ಟ್ರಪತಿಯಾಗಿದ್ದ ಪ್ರತಿಭಾ ಪಾಟೀಲರು ಅಲ್ಲದೆ ದ್ರೌಪದಿ ಮುರ್ಮು ರವರೆಗೂ ರಾಜಕೀಯ ಕ್ಷೇತ್ರದಲ್ಲಿ ಮಿನುಗುತ್ತಿರುವ ಮಹಿಳಾ ಮಣಿಗಳ ಹಲವು ನಿದರ್ಶನಗಳನ್ನು ಕಾಣಬಹುದಾಗಿದೆ.

ಇದಲ್ಲದೆ ಕ್ರೀಡೆ, ಸಾಹಿತ್ಯ, ಕಲೆ, ಹಾಗೂ ಸಾಂಸ್ಕೃತಿಕ ವಲಯಗಳಲ್ಲಿಯೂ ಕೂಡ ಇಂದ ಮಹಿಳೆಯರು ಅಪಾರವಾದ ಸಾಧನೆ ಗೈದಿದ್ದಾರೆ. ಸಾನಿಯಾ ಮಿರ್ಜಾ, ದಿವಂಗತ ಗಂಗೂಬಾಯಿ ಹಾನಗಲ್, ಶಬಾನಾ ಅಜ್ಮಿ, ಲತಾ ಮಂಗೇಶ್ಕರ್, ಮಹಾ ಶ್ವೇತಾದೇವಿ, ವೈಜಯಂತಿ ಮಾಲಾ ಮೊದಲಾದ ಮಹಿಳೆಯರು ಭಾರತ ದೇಶದ ನಾರಿಯರ ಬದುಕನ್ನು ಸಮೃದ್ಧಿಗೊಳಿಸಿದ ಮಹಾನ್ ವ್ಯಕ್ತಿಗಳಾಗಿದ್ದಾರೆ.

ಮಹಿಳೆಯು 21 ನೇ ಶತಮಾನದ ಇಂದಿನ ಕಾಲ ಘಟ್ಟದಲ್ಲಿ ಪುರುಷರಿಗೆ ಸರಿಸಮನಾದ ಸಾಧನೆ ಗೈದಿದ್ದರೂ ಕೂಡ ಸಮಸ್ಯೆಗಳಿಂದ ಅವಳ ಬದುಕು ಸಂಪೂರ್ಣವಾಗಿ ಹೊರತಾಗಿಲ್ಲ. ಆರ್ಥಿಕ ಸಾಮಾಜಿಕ, ರಾಜಕೀಯ, ಧಾರ್ಮಿಕ, ಮೊದಲಾದ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಇರುವ ಅಸಮಾನತೆಯು ಸಂಪೂರ್ಣ ಹೋಗಿಲ್ಲ. ಸಮಾನ ದುಡಿಮೆ ಸಮಾನ ವೇತನ ನೀತಿ ಜಾರಿಗೆ ಬಂದಿಲ್ಲ. ಹೆಣ್ಣು ಶಿಶು ಹತ್ಯೆಯಿಂದ ಸ್ತ್ರೀಯರ ಸಂಖ್ಯೆ ಇಳಿಮುಖವಾಗುತ್ತಿದೆ. ವರದಕ್ಷಿಣೆ ಸಮಸ್ಯೆ ಅವಳನ್ನು ನಿರಂತರವಾಗಿ ಕಾಡುತ್ತಿದೆ. ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು ನಿರಂತರವಾಗಿವೆ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕೊನೆ ಮೊದಲಿಲ್ಲವಾಗಿದೆ. ಮಾನವ ಸಮುದಾಯದ ಒಟ್ಟು ಅಭಿವೃದ್ಧಿಯಲ್ಲಿ ಈ ಎಲ್ಲ ಅಂಶಗಳು ತೊಡಕಾಗಿದ್ದು, ಸಮಾಜದ ಅಭಿವೃದ್ಧಿಗೆ ಹಿನ್ನಡೆಯನ್ನುಂಟುಮಾಡಿವೆ. ಇವೆಲ್ಲವೂ ನಿವಾರಣೆಯಾಗದ ಹೊರತು ಮಾನವ ಜನಾಂಗದ ಒಟ್ಟಾರೆ ಅಭಿವೃದ್ಧಿಯ ಕನಸು ಕನಸಾಗಿಯೇ ಉಳಿಯುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಅನುಪಮಾ ನಿರಂಜನ; ಸಾಹಿತ್ಯ ಮತ್ತು ಪ್ರಗತಿ, ಡಿ.ವಿ.ಕೆ ಮೂರ್ತಿ ಪ್ರಕಾಶಕರು, 2008 ಮೈಸೂರು.
2. ಕೇಶವಶರ್ಮ: ಕೆ; ಸ್ತ್ರೀವಾದಿ ಪರಿಕಲ್ಪನೆಗಳು, ದೇಶಿ ಪುಸ್ತಕ ಪ್ರಕಾಶನ, 2013 ಬೆಂಗಳೂರು.
3. ಡಾ: ಗೀತಾ ಪ್ರಸಾದ್; ಆಧುನಿಕ ಮಹಿಳಾ ಅಭಿವ್ಯಕ್ತಿ, ಧಾತ್ರಿ ಪುಸ್ತಕ, 2009 ಬೆಂಗಳೂರು.